ದಿನಾಂಕ: 12.10.2021ರಂದು ಬೆಳಿಗ್ಗೆ 10.30 ಗಂಟೆಗೆ ಶಿವನಗರ ವಾರ್ಡ್ ನಂ. 107 ರಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಲಿಂಗಣ್ಣ ಗುಂಡಳ್ಳಿ, ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಎಸ್. ಸುರೇಶ್ ಕುಮಾರ್ , ಮಾನ್ಯ ಶಾಸಕರು, ರಾಜಾಜಿನಗರ ವಿಧಾನ ಸಭಾ ಕ್ಷೇತ್ರ
2. ಶ್ರೀ ಯೋಗೇಶ್.ಕೆ.ಪಿ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
3. ಶ್ರೀಮತಿ ಸುಮಲತಾ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ಎಸ್.ಡಬ್ಲ್ಯೂ.ಎಂ.]
4. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ [ಪ್ರಭಾರ]
5. ಶ್ರೀ ಆರ್. ನರಸಿಂಹ, ವಾಟರ್ ನಿರೀಕ್ಷಕರು
6. ಶ್ರೀ ಶಿವಕುಮಾರ್, ಅರಣ್ಯ ಇಲಾಖೆ
7. ಶ್ರೀ ಅನಿಕೇಶ್, ಕಿರಿಯ ಆರೋಗ್ಯ ಪರಿವೀಕ್ಷಕರು
8. ಶ್ರೀ ಎನ್.ಹೆಚ್. ನಾಗರಾಜ್
9. ಶ್ರೀ ಆರ್. ಶ್ರೀನಿವಾಸ ನಾಯ್ಡು, ಸದಸ್ಯರು
10. ಶ್ರೀ ನಾಗರಾಜ್, ಅಧ್ಯಕ್ಷರು
11. ಶ್ರೀ ಮಂಜುನಾಥಸ್ವಾಮಿ, ಉಪ ಅಧ್ಯಕ್ಷಕರು
12. ಶ್ರೀ ಸಂದೀಪ್.ಎಂ.
13. ಶ್ರೀ ಕೇಶವಮೂರ್ತಿ
14. ಶ್ರೀ ಶಿವಕುಮಾರಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
15. ಶ್ರೀ ನಾಗರಾಜ್, ಸಹಾಯಕ ಅಭಿಯಂತರರು
16. ಶ್ರೀ ರಾಘವೇಂದ್ರ, ಪ್ರೆಸಿಡೆಂಟ್
17. ಶ್ರೀ ದಿಲೀಪ್,
18. ಶ್ರೀ ಎಸ್.ಪಿ. ಶ್ರೀಧರ್
19. ಶ್ರೀ ರಾಮಣ್ಣ
20. ಶ್ರೀ ಎಂ. ಶಿವಸ್ವಾಮಿ
21. ಶ್ರೀ ಎಲ್ ಸತೀಶ್,
22. ಶ್ರೀ ಲಿಂಗಣ್ಣಗೌಡ

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 107ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ವಾರ್ಡ್ ಕಮಿಟಿ ಸಭೆಗೆ ಪ್ರಪ್ರಥಮ ಬಾರಿಗೆ ಮಾನ್ಯ ಶ್ರೀ ಎಸ್. ಸುರೇಶ್ ಕುಮಾರ್, ರಾಜಾಜಿನಗರ ಕ್ಷೇತ್ರದ ಶಾಸಕರು ಹಾಗೂ ಮಾಜಿ ಮಂತ್ರಿಗಳು, ಕರ್ನಾಟಕ ಸರ್ಕಾರ ರವರು ನೋಡಲ್ ಅಧಿಕಾರಿಗಳೊಂದಿಗೆ ಹಾಗೂ ವಾರ್ಡ್ ಕಮಿಟಿಯ ಸದಸ್ಯರು ಮತ್ತು ನೌಕರರುಗಳೊಂದಿಗೆ ಆಸೀನರಾಗಿರುತ್ತಾರೆ ಎಂಬ ಮಾಹಿತಿಯನ್ನು ಸಭೆಯಲ್ಲಿ ಗೌರವಾನ್ವಿತವಾಗಿ ಸ್ವಾಗತಿಸಲಾಯಿತು. ಹಾಗೂ ಸಭೆಯನ್ನು ಪ್ರಾರಂಭಿಸಲು ಕೋರಲಾಯಿತು.
2. ನೋಡಲ್ ಅಧಿಕಾರಿಗಳು ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾಗಿ, ವಿವಿಧ ಇಲಾಖೆಯಿಂದ ಹಾಜಾರಾಗಿರುವ ಅಧಿಕಾರಿಗಳು / ನೌಕರರಿಗೆ ಹಾಗೂ ವಾರ್ಡ್ ಸದಸ್ಯರುಗಳಿಗೆ ವಾರ್ಡ್ ಕಮಿಟಿ ಸಭೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಸಹಾಯಕ ಅಭಿಯಂತರರೊಂದಿಗೆ ಚರ್ಚಿಸಲಾಗಿ ಮಹಾಗಣಪತಿನಗರ ಮತ್ತು ಮಂಜುನಾಥನಗರ ವ್ಯಾಪ್ತಿಯಲಿ ಈ ಹಿಂದೆ ನಿರ್ಮಾಣಗೊಂಡಿರುವ ಮ್ಯಾನ್ ಹೋಲ್‌ಗಳು ಆಯ್ದ ಭಾಗಗಳಲ್ಲಿ ಶಿಥಿಲಗೊಂಡು ಬಿದ್ದು ಹೋಗುವ ಸಂಭವವಿರುತ್ತದೆ. ಅಂತಹ ಮ್ಯಾನ್ ಹೋಲ್ ಗಳನ್ನು ತುರ್ತಾಗಿ ಹೊಸದಾಗಿ ನಿರ್ಮಾಣ ಮಾಡಲು ಸಭೆಯಲ್ಲಿ ಚರ್ಚಿಸುತ್ತಾ, ಕೆಲವು ಮ್ಯಾನ್ ಹೋಲ್‌ಗಳು ಹೂಳಿನಿಂದ ತುಂಬಿದ್ದು, ಸರಾಗವಾಗಿ ನೀರು ಹರಿಯದೆ ರಸ್ತೆಯ ಮೇಲೆ ಹರಿದು ಜನ ಸಾಮ್ಯನರಿಗೆ ತೊಂದರೆಯಾಗುವುದನ್ನು ನಿವಾರಿಸುವ ಸಲುವಾಗಿ

Scanned by CamScanner

ತಮ್ಮ ಇಲಾಖೆ ವತಿಯಿಂದ ಹೂಳು ತೆಗೆದು ಮ್ಯಾನ್ ಹೋಲ್ ಪಕ್ಕದಲ್ಲಿಯೇ ಹಾಕಿ ಹಾಗೇಯೆ ಬಿದ್ದಿರುವುದರಿಂದ ಅಕ್ಕಪಕ್ಕದ ವಾಸ ಮಾಡುತ್ತಿರುವ ನಿವಾಸಿಗಳಿಗೆ ಪ್ರಸ್ತುತ ಕೋವಿಡ್ ಇರುವುದರಿಂದ ರೋಗ ರುಜನೆಗಳು ಉಲ್ಬಣಗೊಳ್ಳುವುದನ್ನು ತಡೆಯುವುದಕ್ಕೋಸ್ಕರ ತುರ್ತಾಗಿ ಮ್ಯಾನ್ ಹೋಲ್‌ಗಳಲ್ಲಿ ತೆಗೆದ ಹೂಳು ಮತ್ತು ಇತರೆ ಜೀವಿಕ ವಸ್ತುಗಳನ್ನು ಬೇರೆಡೆಗೆ ಸಾಗಿಸಲು ಮುಕ್ತ ಕಂಠದಿಂದ ಸಭೆಯಲ್ಲಿ ಮಾನ್ಯ ಶಾಸಕರು ಸೂಚನೆಯನ್ನು ನೀಡಿರುತ್ತಾರೆ.

3. ನೋಡಲ್ ಅಧಿಕಾರಿಗಳ ಸಮಕ್ಷಮದಲ್ಲಿ ಚರ್ಚಿಸಲಾಗಿ, ವಾರ್ಡ್ ನಂ. 107ರಲ್ಲಿ ಇಲ್ಲಿಯವರೆಗೆ ಕೋವಿಡ್-19 ವಿವರದ ಬಗ್ಗೆ ಹಿರಿಯ ಆರೋಗ್ಯ ಅಧಿಕಾರಿಗಳೊಂದಿಗೆ ಮಾಹಿತಿಯನ್ನು ಪಡೆಯುವ ಸಮಯದಲ್ಲಿ ಇಲ್ಲಿಯವರೆಗೆ ಕೋವಿಡ್ ಪ್ರಮಾಣ ಉದ್ಭವಿಸಿದ್ದು, ಅದಕ್ಕೆ ಸಂಬಂಧಿಸಿದ ವ್ಯಾಕ್ಸಿನ್‌ನ್ನು ಪ್ರತಿ ದಿನ 200 ರ ಪ್ರಮಾಣದಲ್ಲಿ ಹಾಗೂ ಅದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಗಂಗಮ್ಮ ತಿಮ್ಮಯ್ಯ ಸಮುಧಾಯ ಭವನದಲ್ಲಿ ಪ್ರತಿ ದಿನ ವ್ಯಾಕ್ಸಿನನ್ನು ವಿತರಣೆ ಮಾಡಲಾಗುತ್ತಿರುವುದರಿಂದ ಸಾರ್ವಜನಿಕರು ಬೃಹತ್ ಪ್ರಮಾಣದಲ್ಲಿ ಸಹಕಾರ ನೀಡಿರುತ್ತಾರೆಂದು ಹಿರಿಯ ಆರೋಗ್ಯ ನಿರೀಕ್ಷಕರು ಮಹತ್ಕಾಂಕ್ಷಿ ವಾರ್ಡ್ ಕಮಿಟಿ ಸಭೆಗೆ ಮಾಹಿತಿಯನ್ನು ನೀಡಿರುತ್ತಾರೆ.

4. ಶ್ರೀ ಹನಿಕೇಶ್, ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಈ ಹಿಂದೆ ಕಸದ ಸಂಗ್ರಹಣೆ ನಿರ್ವಹಣೆಯನ್ನು ಸರ್ವಿಸ್ ರಸ್ತೆಯಲ್ಲಿ ನಿಗಧಿಪಡಿಸಲಾಗಿದ್ದು, ಮಾನ್ಯ ಶಾಸಕರು ಸದರಿ ಸ್ಥಳವನ್ನು ಬೇರೆಡೆಗೆ ನಾವು ಸೂಚಿಸುವ ಜಾಗದಲ್ಲಿ ಸಂಗ್ರಹಿಸಿಕೊಂಡು ದಿನನಿತ್ಯ ಕಾಂಪ್ಯಾಕ್ಟರ್ ಮೂಲಕ ನಿಗಧಿಪಡಿಸಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಾರ್ಡ್‌ಗೆ ಕಳುಹಿಸಿ, ಸದರಿ ಸ್ಥಳದ ಸುತ್ತ ಮುತ್ತ ಹಾಗೂ ಸರ್ವಿಸ್ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರಿಗೆ ಮತ್ತು ರಸ್ತೆಯಲ್ಲಿ ಓಡಾಡುವ ಜನಸಾಮನ್ಯರಿಗೆ ಯಾವುದೇ ರೀತಿಯ ಆರೋಗ್ಯದಲ್ಲಿ ವ್ಯತಿರಿಕ್ತ ಪರಿಣಾಮ ಬೀರದಂತೆ ಕಾಪಾಡಿಕೊಳ್ಳುವುದೆಂದು ಘನತ್ಯಾಜ್ಯ ಅಧಿಕಾರಿಗಳಿಗೆ ಸಭೆಯ ಮುಕ್ತ ಕಂಠದಿಂದ ತಿಳಿಸಲು ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.

5. ಶಿವನಗರ ಮತ್ತು ಮಹಾಗಣಪತಿನಗರ ಹಾಗೂ ಧೋಬಿಘಾಟ್ ರಸ್ತೆಯಲ್ಲಿ ರಸ್ತೆಗುಂಡಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉಲ್ಬಣಗೊಂಡಿದ್ದು, ಸಾರ್ವಜನಿಕರು ದಿನ ನಿತ್ಯ ಓಡಾಡಲು ತುಂಬಾ ತೊಂದರೆಯಾಗಿದೆ ಎಂದು ಸಭೆಯಲ್ಲಿ ಚರ್ಚಿಸಲಾಯಿತು. ಈಗಾಗಲೇ ಮುಖ್ಯ ಅಭಿಯಂತರರ ಆದೇಶದಂತೆ ರಸ್ತೆ ಗುಂಡಿಗಳನ್ನು ಮುಚ್ಚಲು ಬೇಕಾಗಿರುವ ಸಾಮಾಗ್ರಿಗಳಿಗೆ ಬೇಡಿಕೆ ಪತ್ರವನ್ನು ಸಲ್ಲಿಸಲು ತಿಳಿಸಿರುತ್ತಾರೆ. ಈಗಾಗಲೇ ರಾಜಾಜಿನಗರ ಇಂಜಿನಿಯರಿಂಗ್ ಉಪವಿಭಾಗ ವತಿಯಿಂದ ಈ ಹಿಂದೆ POW ಕಾಮಗಾರಿಗಳ ಪಟ್ಟಿಯಲ್ಲಿ ಟೆಂಡರ್ ಮೂಲಕ ಅನುಮೋದನೆಗೊಂಡಿರುವ ಕಾಮಗಾರಿಯಲ್ಲಿ ಮೇಲೆ ಕಾಣಿಸಿರುವ ಎರಡು ಪ್ರದೇಶಗಳಲ್ಲಿ ಗುಂಡಿ ಮುಚ್ಚುವ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಿರುತ್ತೇವೆ ಎಂದು ಸಭೆಯಲ್ಲಿ ವಾರ್ಡ್ ಅಭಿಯಂತರರು ಸಮರ್ಪವಾಗಿ ಉತ್ತರ ನೀಡಿರುತ್ತಾರೆ.

6. ನೋಡಲ್ ಅಧಿಕಾರಿಗಳು, ವಾರ್ಡಿನಲ್ಲಿ ಒಣಗಿರುವ ಮತ್ತು ಕಡಿದಿರುವ ಮರಗಳ ಕೊಂಬೆಗಳನ್ನು ಮತ್ತು ಕೆಲವು ರಸ್ತೆಗಳಲ್ಲಿ ಪ್ರಸ್ತುತ ದಿನಗಳಲ್ಲಿ ಮರದ ಕೊಂಬೆಗಳು ಜೋತು ಬಿದ್ದು, ಮತ್ತು ಇನ್ನು ಕೆಲವು ಮರಗಳು ಬಿದ್ದಿರುವ ಮರಗಳ ಬುಡಗಳನ್ನು ತೆರವುಗೊಳಿಸದೆ ಇರುವುದರಿಂದ ಪಾದಚಾರಿ ಮಾರ್ಗದಲ್ಲಿ ಸಂಚರಿಸುವ ಜನ ಸಾಮಾನ್ಯರಿಗೆ ತೊಂದರೆಯಾಗಿದೆ ಎಂದು ಮಾನ್ಯ ಶಾಸಕರಿಗೆ ವಾರ್ಡ್ ಕಮಿಟಿ ಸದಸ್ಯರು ಗಮನಕ್ಕೆ ತಂದಾಗ ಮಾನ್ಯ ಶಾಸಕರು ತುರ್ತಾಗಿ ಅಂತಂತ ಮರಗಳು, ಕೊಂಬೆಗಳು, ಬುಡಗಳು, ತುರ್ತಾಗಿ ತೆರವುಗೊಳಿಸುವಂತೆ ಅರಣ್ಯಾಧಿಕಾರಿಗಳಿಗೆ ಸಭೆಯಲಿ ಸೂಚಿಸಿರುತ್ತಾರೆ.

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ತಿಳಿಸುವ ದೂರುಗಳನ್ನು ಸರಿಪಡಿಸಿ, ಮುಂದಿನ ಸಭೆಯಲ್ಲಿ ವರದಿಯನ್ನು ನೀಡುವಂತೆ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 107

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು

Scanned by CamScanner